# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/3037/2022
ಮಂಡನಾಧಿಕಾರಿಗಳ ಶಾಖೆ / ಪಿಓ-ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 16/01/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

ವಿಷಯ: **ಶ್ರೀ ಪರಶುರಾಮ, ಸಹಾಯಕ ಔಷಧ ನಿಯಂತ್ರಕರು-2, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ದಾವಣಗೆರೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

ಪೊಲೀಸ್ ಇನ್ಸ್‌ಪೆಕ್ಟರ್, ಅಂದಿನ ಭ್ರಷ್ಟಾಚಾರ ನಿಗ್ರಹದಳ, ದಾವಣಗೆರೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಪರಶುರಾಮ, ಸಹಾಯಕ ಔಷಧ ನಿಯಂತ್ರಕರು-2, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ದಾವಣಗೆರೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರನ್ನು ದೂರುದಾರರಾದ **ಶ್ರೀ ಶೌಕತ್ ಆಲಿ ತಂದೆ ಅಬ್ದುಲ್ ಶೂಕೂರ್ ಸಾಬ್, ನಲ್ಲೂರು ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ :** ದೂರುದಾರರು ತಮ್ಮ ದೂರಿನಲ್ಲಿ, ತಾನು ಮೆಡಿಕಲ್ ರೆಪ್ ಆಗಿದ್ದು ಹಾಗೂ ಮೆಡ್ ಲೈಫ್ ಫಾರ್ಮಾದಲ್ಲಿ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದು, ದಾವಣಗೆರೆ ನಗರದ ಲೇಬರ್ ಕಾಲೋನಿಯಲ್ಲಿ ತನ್ನ ಹೆಸರಿನಲ್ಲಿ "ಮೆ: ಹಿಂದೂಸ್ತಾನ್ ಮೆಡಿಕೋ" ಎಂಬ ಹೆಸರಿನ ಫಾರ್ಮಾವನ್ನು ಪ್ರಾರಂಭಿಸಲು ಲೈಸನ್ಸ್ ಕೋರಿ, ದಾವಣಗೆರೆಯ ಎದುರುದಾರರ ಕಛೇರಿಗೆ ಮಾರ್ಚ್-2019 ನೇ ಮಾಹೆಯಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ್ದು, ಅದಕ್ಕೆ ಎದುರುದಾರರ ಕಛೇರಿಯಿಂದ ಅಗತ್ಯವಾದ ಪೂರಕ ದಾಖಲೆಗಳನ್ನು ಒದಗಿಸಲು ಸೂಚಿಸಿದ ಮೇರೆಗೆ, ದೂರುದಾರರು 2019 ನೇ ಮಾರ್ಚ್ ಮತ್ತು ಏಪ್ರಿಲ್ ಮಾಹೆಗಳಲ್ಲಿ ಇಲ್ಲಾ ದಾಖಲೆಗಳನ್ನು ಎದುರುದಾರರ ಕಛೇರಿಗೆ ಸಲ್ಲಿಸಿರುತ್ತಾರೆ. ಲೈಸನ್ಸ್ ಪಡೆಯುವ ಬಗ್ಗೆ ದೂರುದಾರರು 2019ನೇ ಏಪ್ರಿಲ್ ಮಾಹೆಯಲ್ಲಿ ಎದುರುದಾರರ ಕಛೇರಿಗೆ ಖುದ್ದು ಭೇಟಿ ಮಾಡಿ, ತಮ್ಮ ಕೆಲಸ ಮಾಡಿಕೊಡುವಂತೆ ಕೇಳಿಕೊಂಡಾಗ, ಎದುರುದಾರರು ಫಾರ್ಮಾ ಲೈಸನ್ಸ್ ನೀಡಲು ರೂ.40,000/- ಲಂಚದ ಬೇಡಿಕೆ ಇಟ್ಟಿದ್ದು, ಆಗ

ದೂರುದಾರರು ಎದುರುದಾರರನ್ನು ಕುರಿತು, ಸಾರ್ ಅಷ್ಟೊಂದಾ, ಕಡಿಮೆ ಮಾಡಿಕೊಳ್ಳಿ ಅಂತಾ ಹೇಳಿ ವಾಪಸ್ಸು ಬಂದು 3-4 ದಿನಗಳ ನಂತರ 15,000/- ರೂ.ಗಳನ್ನು ತೆಗೆದುಕೊಂಡು ಬಂದು ಎದುರುದಾರರಿಗೆ ಕೊಟ್ಟು, ತನ್ನ ಕೆಲಸವನ್ನು ಮಾಡಿಕೊಡುವಂತೆ ಕೋರಿದಾಗ, ಎದುರುದಾರರು ದೂರುದಾರರನ್ನು ಕುರಿತು, ಇಲ್ಲಾ ಆಗೋಲ್ಲಾ ಪೂರ್ತಿ ಹಣ ಕೊಡು ಮಾಡಿಕೊಡ್ತಿನಿ ಅಂತಾ ಹೇಳಿ ಪುನ: ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ್ದರಿಂದ, ದಿನಾಂಕ: 20/05/2019ರಂದು ಪೊಲೀಸ್ ಉಪಾಧೀಕ್ಷಕರು, ಅಂದಿನ ಭ್ರಷ್ಟಾಚಾರ ನಿಗ್ರಹ ದಳ, ದಾವಣಗೆರೆ, ಇವರಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಮೇರೆಗೆ ಮೊ.ಸಂಖ್ಯೆ: 06/2019 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7(ಎ) ಅಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ.

3. ದಿನಾಂಕ: 20/05/2019 ರಂದು ತನಿಖಾಧಿಕಾರಿಯವರು ಪಂಚರಾದ ಶ್ರೀ ದತ್ತಾತ್ರೇಯರಾವ್ ಶಾನಬೋಗ್ - ಪಂಚ-1, ಶ್ರೀ ಮಂಜುನಾಥ ಎಲ್ - ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ ರೂ.30,000/- ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚ-1 ರವರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-2 ರವರು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ (ಡಿನಾಮಿನೇಷನ್ 2000 x 15). ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ, ಪಂಚ-1 ರವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ ಲಂಚದ ಹಣ ರೂ.30,000/- ಗಳನ್ನು ಎಣಿಸಿ, ದೂರುದಾರರು ಧರಿಸಿದ ಶರ್ಟಿನ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದರೆ, ಅಥವಾ ಅವರು ಹೇಳಿದವರಿಗೆ ಕೊಟ್ಟ ನಂತರ, ತನ್ನ ತಲೆಯನ್ನು ಕೆರೆದುಕೊಳ್ಳುವ ಮೂಲಕ, ಸಂಜ್ಞೆಯನ್ನು ನೀಡಬೇಕೆಂದು ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರು ಎದುರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು, ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಪಂಚ-2 ರವರಿಗೆ ಸೂಚನೆಯನ್ನು ನೀಡಿ, ದೂರುದಾರರ ಜೊತೆ ಇದ್ದು, ಘಟನೆಯನ್ನು ಗಮನಿಸುವಂತೆ ಹಾಗೂ ಕೇಳಿದಾಗ ವಿವರಿಸುವಂತೆ ಹೇಳಿರುತ್ತಾರೆ. ನಂತರ ತನಿಖಾಧಿಕಾರಿಯವರು ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆ ದಿನಾಂಕ: 20/05/2019ರಂದು ಮಧ್ಯಾಹ್ನ 12.30 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಮಾಡಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ.

4. ಅದೇ ದಿನ ಅಂದರೆ, ದಿನಾಂಕ: 20/05/2019ರಂದು ದೂರುದಾರರು ತನಿಖಾಧಿಕಾರಿಯನ್ನು ಕುರಿತು, ತಾನು ರೋಜ ಇರುತ್ತೇನೆ, ಮಸೀದಿಗೆ ಹೋಗಿ ಪ್ರಾರ್ಥನೆ ಮಾಡಿ, 10 ನಿಮಿಷದಲ್ಲಿ ಬರುತ್ತೇನೆ, ದಾವಣಗೆರೆ ನಗರದ ಕೆಬಿ ಬಡಾವಣೆ, ಕೆನರಾ ಬ್ಯಾಂಕ್ ಬಳಿ ಇರಿ, ಅಲ್ಲಿಗೆ ಬರುತ್ತೇನೆಂದು ಹೇಳಿ ಹೋಗಿರುತ್ತಾರೆ. ಅದರಂತೆ, ತನಿಖಾಧಿಕಾರಿಯವರು, ಸಿಬ್ಬಂದಿ, ಮತ್ತು ಪಂಚರನ್ನು ಕರೆದುಕೊಂಡು ಮಧ್ಯಾಹ್ನ: 2.30 ಗಂಟೆಗೆ ಎ.ಸಿ.ಬಿ ಠಾಣೆಯನ್ನು ಬಿಟ್ಟು, ಕೆ.ಬಿ.ಬಡಾವಣೆ, ಕೆನರಾ ಬ್ಯಾಂಕ್ ಬಳಿ ಬಂದಿರುತ್ತಾರೆ. ಆಗ ಸಮಯ 2.50 ಗಂಟೆಯಾಗಿರುತ್ತದೆ, ನಂತರ ದೂರುದಾರರು ತನಿಖಾಧಿಕಾರಿಗೆ ಫೋನ್ ಮಾಡಿ ತಾನು ರಂಜಾನ್ ಹಬ್ಬದ ಪ್ರಯುಕ್ತ ರೋಜ ಇದ್ದು, ತನಗೆ ಸುಸ್ತಾಗಿ ತಲೆ ಚಕ್ಕರ್ ಬಂದು ಅನಾರೋಗ್ಯ ನಿಮಿತ್ತ ದಾವಣಗೆರೆ ನಗರ ಬಾಪೂಜಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿರುವುದಾಗಿ ಫೋನ್ ಮುಖಾಂತರ ತಿಳಿಸಿದಾಗ, ತನಿಖಾಧಿಕಾರಿ ದೂರುದಾರರನ್ನು ಕುರಿತು ದೂರುದಾರರ ಬಳಿ ಇರುವ ಲಂಚವಾಗಿ ಕೊಡಬೇಕಾಗಿರುವ ಹಣವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಿ ಎಂದು ಸೂಚನೆಯನ್ನು ನೀಡಿ, ದೂರುದಾರರು ಆಸ್ಪತ್ರೆಗೆ ದಾಖಲಾಗಿರುವುದರ ಬಗ್ಗೆ ಖಾತ್ರಿಪಡಿಸಿಕೊಂಡು, ದೂರುದಾರರು ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಕಾರ್ಯಾಚರಣೆಯನ್ನು ಮುಂದುವರೆಸುವುದಾಗಿ ತೀರ್ಮಾನಿಸಿ ಠಾಣೆಗೆ ವಾಪಸ್ಸು ಬಂದು, ಮಧ್ಯಾಹ್ನ 4.30 ರಿಂದ ಸಾಯಂಕಾಲ 5.00 ಗಂಟೆಗೆ ಪಂಚರ ಸಮಕ್ಷಮ ಟ್ರ್ಯಾಪ್ ಮುಂದೂಡಿದ ಪಂಚನಾಮೆಯನ್ನು ಬರೆದಿರುತ್ತಾರೆ.

5. ನಂತರ, ದಿನಾಂಕ: 27/05/2019 ರಂದು ದೂರುದಾರರು ಠಾಣೆಗೆ ಹಾಜರಾಗಿ, ತಾನು ದಿ: 20/05/2019 ರಂದು ಎದುರುದಾರರ ಮೇಲೆ ದೂರು ನೀಡಿ ಪ್ರಕರಣ ದಾಖಲಾದ ನಂತರ ಠಾಣೆಯಲ್ಲಿ ಜರುಗಿಸಿದ ಪ್ರಾಯೋಗಿಕ ಪಂಚನಾಮೆ ನಂತರ, ಟ್ರ್ಯಾಪ್‌ಗೆ ಹೊರಟಾಗ, ಎದುರುದಾರರ ಮೇಲೆ ಕ್ರಮ ಕೈಗೊಳ್ಳುವ ಸಂಬಂಧ ತನಗೆ ಹಿಂಜರಿಕೆಯಾಗಿದ್ದು, ತಾನು ರಂಜಾನ್ ಹಬ್ಬದ ಉಪವಾಸ ಇದ್ದುದರಿಂದ ರಕ್ತದ ಒತ್ತಡದಲ್ಲಿ ಏರುಪೇರು ಉಂಟಾಗಿ, ತಾನು ತಕ್ಷಣ ದಾವಣಗೆರೆ ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು, ರಾತ್ರಿ ಮನೆಗೆ ಬಂದಾಗ, ತಾನು ಮನೆಯವರಿಗೆ ನಡೆದ ಘಟನೆಗಳ ಬಗ್ಗೆ ವಿವರಿಸಿದಾಗ, ತನ್ನ ಮನೆಯವರೂ ಸಹ ಯಾವುದೇ ಕಂಪ್ಲೇಂಟ್ ಬೇಡ ಅಂತ ಹೇಳಿದರು, ನಂತರ ತನ್ನ ಸಂಬಂಧಿ ನಲ್ಲೂರು ಗ್ರಾಮ ಉಸ್ಮಾನ್ ಷರೀಫ್ (ಚೋಟು) ಎಂಬುವವರು ಎದುರುದಾರರನ್ನು ದಿನಾಂಕ: 25/05/2019 ರಂದು ಕಛೇರಿಯಲ್ಲಿ ಭೇಟಿಯಾಗಿ, ಎದುರುದಾರರ ವಿರುದ್ಧ ದೂರುದಾರರು ಎಸಿಬಿ ಯಲ್ಲಿ ಪ್ರಕರಣ ದಾಖಲಿಸಿರುವುದಾಗಿ ಮಾಹಿತಿ ತಿಳಿಸಿ, ತಮ್ಮ ಕೆಲಸ ಮಾಡಿಕೊಡಿ ಅಂತ ಕೇಳಿದಾಗ, ದೂರುದಾರರು ತೆರೆಯಲು ಉದ್ದೇಶಿಸಿದ್ದ ಹಿಂದೂಸ್ತಾನ್ ಮೆಡಿಕೋ ಫಾರ್ಮಾಗೆ ಪರವಾನಿಗೆಯನ್ನು ನೀಡಿದ್ದು, ಚೋಟುರವರು ಮನೆಗೆ ಬಂದು ದೂರುದಾರರಿಗೆ ಪರವಾನಿಗೆ ಪತ್ರವನ್ನು ನೀಡಿರುತ್ತಾರೆ ಎಂದು ಹೇಳಿ ತನಿಖಾಧಿಕಾರಿಗೆ ಸದರಿ ಪರವಾನಿಗೆ ಪತ್ರವನ್ನು ಹಾಜರುಪಡಿಸಿರುತ್ತಾರೆ.

6. ನಂತರ ತನಿಖಾಧಿಕಾರಿ ಎದುರುದಾರರ ಒಪ್ಪಿತ ಮಾದರಿ ಧ್ವನಿಯನ್ನು ಪಡೆಯುವ ಸಲುವಾಗಿ ಎದುರುದಾರರಿಗೆ ನೋಟೀಸ್ ಜಾರಿ ಮಾಡಿದ್ದು, ಅದರಂತೆ ದಿ: 23/07/2019 ರಂದು ಎದುರುದಾರರು ಠಾಣೆಗೆ ಹಾಜರಾಗಿರುತ್ತಾರೆ. ಆ ಸಂಬಂಧವಾಗಿ ತನಿಖಾಧಿಕಾರಿ ಮಾದರಿ ಧ್ವನಿ ಮುದ್ರಿಸುವ ಪ್ರಕ್ರಿಯೆಯನ್ನು ಅನುಸರಿಸಿ, ಪಂಚರ ಸಮಕ್ಷಮ ಮಾದರಿ ಧ್ವನಿ ಪಂಚನಾಮೆಯನ್ನು ಮಧ್ಯಾಹ್ನ 12.50 ರಿಂದ ಮಧ್ಯಾಹ್ನ 1.30 ರವರೆಗೆ ಬರೆದಿರುತ್ತಾರೆ.

7. ತನಿಖಾಧಿಕಾರಿಯವರು ಸಿಡಿಗಳಲ್ಲಿ ದಾಖಲಿಸಿದ ದೂರುದಾರರ ಹಾಗೂ ಎದುರುದಾರರ ಸಂಭಾಷಣೆ ಮತ್ತು ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು, ಇವರ ವರದಿಯಿಂದ ದೃಢಪಟ್ಟಿದೆ.

8. ಎದುರುದಾರರಿಗೆ ದಿನಾಂಕ: 27/09/2022 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಸದರಿಯವರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ದಾಖಲಾತಿಗಳೊಂದಿಗೆ ದಿ: 17/10/2021 ರಂದು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ದೂರುದಾರರು ದಿ: 13/05/2019 ರಂದು ಹಿಂದೂಸ್ತಾನ್ ಮೆಡಿಕೋ ಹೆಸರಿನಲ್ಲಿ ಸಗಟು ಔಷಧಿ ವ್ಯಾಪಾರಕ್ಕಾಗಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಿದ್ದು, ಅದೇ ದಿನ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸಿರುವುದಾಗಿ ಒಪ್ಪಿಕೊಳ್ಳುತ್ತಾರೆ. ಹಾಗೂ ದಿ: 25/05/2019 ರಂದು ದೂರುದಾರರು ಅರ್ಜಿಯಲ್ಲಿ ನಮೂದಿಸಿದ, ಸಗಟು ವ್ಯಾಪಾರದ ಸ್ಥಳಕ್ಕೆ ಭೇಟಿ ನೀಡಿ, ಸ್ಥಳವನ್ನು ವೀಕ್ಷಿಸಿ, ಅದೇ ದಿನ ಆನ್‌ಲೈನ್‌ನಲ್ಲಿ ದೂರುದಾರರಿಗೆ ಲೈಸೆನ್ಸ್‌ನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಪರಿಶೀಲನಾ ಟಿಪ್ಪಣಿಯ ಖಂಡಿಕೆ 2(i)(ii)(iii) ಮತ್ತು (iv) ರ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಹಾಗೂ ಖಂಡಿಕೆ 2(v) ರಂತೆ ದಿ: 25/05/2019 ರಂದು ದೂರುದಾರರ ದೂರನ್ನು ಸ್ವೀಕರಿಸಿ, 02 ತಿಂಗಳ ನಂತರ ತನ್ನ ಮಾದರಿ ಧ್ವನಿಯನ್ನು ತನಿಖಾಧಿಕಾರಿಯವರು ಸಂಗ್ರಹಿಸಿರುವುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ, ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ಪರಿಶೀಲನಾ ಟಿಪ್ಪಣಿಯ ಖಂಡಿಕೆ 2(vi) (vii) ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ತಾನು ಕೆಸಿಎಸ್ (ನಡತೆ) ನಿಯಮಗಳು, 1966 ಮತ್ತು 2021ರ ಯಾವುದೇ ನಿಯಮವನ್ನು ಉಲ್ಲಂಘಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ತನ್ನ ವಿರುದ್ಧ ದಾವಣಗೆರೆ ಪ್ರಧಾನ ಜಿಲ್ಲಾ ಸತ್ರ ಹಾಗೂ ವಿಶೇಷ ನ್ಯಾಯಾಲಯದಲ್ಲಿ, ಸ್ಪೆಷಲ್ (ಎಲ್‌ಓಕೆ) ನಂ: 2/2022 ಪ್ರಕರಣದ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ಹಾಗಾಗಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

9. ಎದುರುದಾರರು ನೀಡಿದ ಸಮಜಾಯಿಷಿಯನ್ನು, ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಎದುರುದಾರರ ಸಮಜಾಯಿಷಿಯನ್ನು ಒಪ್ಪಲು ಸಕಾರಣಗಳು ಕಂಡು ಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರೆ

ಅಂಶಗಳಿಂದ ಎದುರುದಾರರು ದೂರುದಾರರಿಗೆ ಲಂಚದ ಬೇಡಿಕೆ ಇಟ್ಟು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗಾಗಿ ಇವರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ.

10. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ ಶ್ರೀ ಪರಶುರಾಮ.ಆರ್ (ನಿವೃತ್ತಿ ದಿನಾಂಕ: 30-03-2031) ಆದ ನೀವು ನಿಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರಕ್ಕೆ ಪ್ರಯತ್ನಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/01/23

**(ನ್ಯಾಯಾಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು**
ಕರ್ನಾಟಕ ರಾಜ್ಯ, ಬೆಂಗಳೂರು